ಅಸಲು ದಾವಾ ನಂಃ **36/2016**

ಪಿ.ಡಬ್ಲ್ಯೂಃ **2,**

ದಿನಾಂಕ :**29-08-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು :- ಶ್ರೀ ಎಸ್. ಎ. ಕೆ. ಪ್ರತಿವಾದಿ ಪರ ವಕೀಲರಿಂದ :

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲಾ. ಅದೇ ರೀತಿ ಇಂಗ್ಲೀಷ ಸಹ ಓದಲು ಮತ್ತು ಬರೆಯಲು ಬರುವುದಿಲ್ಲಾ. ನನಗೆ ವಾದಿ ತಂದೆ ಸೂರ್ಯಕಾಂತ ಇವರು 40 ವರ್ಷಗಳಿಂದ ಪರಿಚಯ. ಅವರು ವಾದಿಯ ತಂದೆ ಸೂರ್ಯಕಾಂತ 1989 ರಲ್ಲಿ ಮೃತವಾಗಿದ್ದಾರೆ. ತಿಂಗಳ ಮತ್ತು ದಿನಾಂಕ ಗೊತ್ತಿಲ್ಲಾ. ನನಗೆ ದಾವೆಯ ಪ್ಲಾಟ ನಂಬರ ಗೊತ್ತಿಲ್ಲಾ ಅದರ ಅಳತೆ 50X60 ಇದೆ ಎಂದು ಗೊತ್ತಿದೆ. ಪೂರ್ವ - ಪಶ್ಚಿಮ : 50 ಅಡಿ, ಉತ್ತರ - ದಕ್ಷಿಣ : 60 ಅಡಿ.

ವಾದಿ ತಂದೆ ದಾವಾ ಆಸ್ತಿಯನ್ನು ಹುಸೇನಸಾಬ ಇಬ್ರಾಹಿಂಸಾಬ ಯಡ್ರಾಮಿ ಇವರಿಂದ ರೂ. 10,000/-ಕ್ಕೆ ಖರಿದಿಸಿದ್ದಾರೆ. ಸದರಿ ಆಸ್ತಿಯನ್ನು 1973-74 ರಲ್ಲಿ ಖರಿದಿಸಿರಬಹುದು. ವಾದಿಯ ತಂದೆ ಖರಿದಿಸಿದ ಖರಿದಿ ಪತ್ರದ ನಂಬರ ಗೊತ್ತಿಲ್ಲಾ. ದಾವಾ ಆಸ್ತಿಯ ಪೂರ್ವಕ್ಕೆ : ಖುಲ್ಲಾ ಜಾಗ ಇದೆ ಯಾರಿಗೆ ಸಂಬಂಧಪಟ್ಟಿದೆ ಎಂದು ಗೊತ್ತಿಲ್ಲಾ, ಪಶ್ಚಿಮಕ್ಕೆ : ಪಾಲಿಸ ಮಶಿನ್, ಉತ್ತರಕ್ಕೆ ಸೂರ್ಯಕಾಂತ ಇವರ 4 ಕೋಣೆಗಳು ಇವೆ, ದಕ್ಷಿಣಕ್ಕೆ : ರಸ್ತೆ ಇದೆ. ದಾವಾ ಆಸ್ತಿಯು 1973 ರಲ್ಲಿ ಖರಿದಿ ಆಗಿದೆ, ಯಾವ ವರ್ಷದಲ್ಲಿ ಹಕ್ಕು ಬದಲಾವಣೆ ಆಗಿದೆ ಗೊತ್ತಿಲ್ಲಾ. ಸದರಿ ಖರಿದಿ ಪತ್ರಕ್ಕೆ ನಾನು ಸಾಕ್ಷಿ ದಾರ ಎಂದು ಸಹಿ ಹಾಕಿಲ್ಲಾ . ಕಟ್ಟಡ ಕಟ್ಟಲು ಯಾವ ವರ್ಷದಲ್ಲಿ ಅನುಮತಿ ಪಡೆಯಲಾಗಿತ್ತು ಗೊತ್ತಿಲ್ಲಾ, ಅದರ ನಂಬರ ಗೊತ್ತಿಲ್ಲಾ. ಈ ಪ್ರಕರಣದಲ್ಲಿ ನಾನು ಸಾಕ್ಷಿ ನುಡಿಯಲು ವಾದಿ ಕರೆದುಕೊಂಡು ಬಂದಿದ್ದಾರೆ. ಜಂಟಿ ಕುಟಂಬ ಅಂದರೆ ಗೊತ್ತಿಲ್ಲಾ ಆದರೆ ಸೂರ್ಯಕಾಂತ ಬೇರೆ ಬೇರೆ ಆಗಿದ್ದಾರೆ ಎಂದು ನುಡಿಯತ್ತಾರೆ. ವಾದಿಯ ತಾಯಿ ಅವರು ಆರೋಗ್ಯದಿಂದ ಇದ್ದು ಮಾತನಾಡುತ್ತಾರೆ ಎಂದರೆ ಸಾಕ್ಷಿ ಮಾತನಾಡುತ್ತಾರೆ ಆದರೆ ಅವರು ಮಾನಸಿಕ ವಾಗಿ ಅಸ್ಥವಸ್ತ ಇದ್ದಾರೆ. ನನ್ನ ಸಾಕ್ಷಿ ಪ್ರಮಾಣ ಪ್ರತದಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲಾ.

ಮರು ವಿಚಾರಣೆ : ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು

**ಚಿತ್ತಾಪೂರ.**